ಅಲ್ವಾ...'

'ಕಮ್ಯುನಿಸ್ಟ್ ಅಂತ... ಒಬ್ರೂ ಸೌಟ್ ಮಾಸ್ಟರ್ರಿದ್ರೂ ಅವ್ರೂ ತಪ್ಪಿ ಕಾಂಗ್ರೆಸ್ ಅಂದಿದ್ದು ಆ ಗಿಡಗಳಿಗೆ... ಉದ್ದುದ್ದ ಬೆಳೆಯೋದಲ್ವ ಎಲ್ಲಿ ಬೇಕಾದ್ರೂ...'

'ಬಟ್ಟ್ ಅದೇ ಕಮ್ಯುನಿಸ್ಟ್ ಅಂತ ಯಾಕ್ ಕರೆದ್ರೂ ಅಂತ... ಎಲ್ಲೆಲ್ಲಿ ಬೇಕಾದ್ರೂ ಬೆಳೆಯುತ್ತೆ ಅಂತಾನ... ಈ ಎಷ್ಟೋ ಸ್ಕೂಲ್ ಅಸೋಸಿಯಷನ್ನೆಲ್ಲ ಇದ್ವಲ್ಲ, ಅವ್ರೆಲ್ಲಾ ಸ್ವಯಂ ಸೇವೆ, ಕ್ಲೀನಿಂಗ್ ಕ್ಯಾಂಪ್ಯೇನ್ಸ್ ಅಂತ ಈ ಗಿಡಗಳನ್ನೆಲ್ಲ ಕಿತ್ತ್-ಕಿತ್ತ್ ಹಾಕ್ತಾ ಇದ್ರಲ್ವ ಕಳೆ ಕಿತ್ತಂಗೆ.... ಅಂದ್ರೆ ಈ ಊರ್ ಜನಕ್ಕೆ ಬುಡ ಸಮೇತ ಕಿತ್ರೂ ಈ ಕಮ್ಯುನಿಸ್ಟ್ ಆ ಗಿಡಗಳ ತರ ಮತ್ತೆ ತಲೆ ಎತ್ತುತ್ತೆ ಅಂತಾನ...'

'ಇರ್ಬಹುದೇನೋ... ನಂಗೊತ್ತಿಲ್ಲ... ಆದ್ರೆ ಏನೇ ತಲೆ ಎತ್ತಿದ್ರೂ ಈ ವಾದದ ಪ್ರಕಾರ ಅಥವಾ ಈ ಜನಗಳ ಪ್ರಕಾರ ಆ ಗಿಡಗಳು ವೇಸ್ಟ್ ಅಂತಾ ಅಲ್ವಾ.... '

'ಹೌದು ಈಗ ಅಮೆರಿಕದವ್ರಿಗೆ ಅವ್ರದೆ ಹಿಸ್ಟ್ರಿ ಅಂದ್ರೇ ವೇಸ್ಟ್ ಅಲ್ವಾ ಹಂಗೇ.... ಅಲ್ಲೂ ಇದ್ರಲ್ಲ ಕಮ್ಯುನಿಸ್ಟರು! ಆ ಮೆಕಾರ್ತಿ ಮನುಷ್ಯ ಒಂದ್ ಕಮಿಟಿ ಬೇರೆ ಮಾಡಿ ನೀವೆಲ್ಲ ಗರ್ವೆಮೆಂಟಿಗೆ ಲಾಯಲ್ ಆಗ್ಬಿರೇಕು ಇಲ್ಲ ಅಂದ್ರೆ ನಿಮ್ಮ ಬಂಡೆ ಬಿಚ್ತೀವಿ.... ನಿಮ್ಮ್ ಕಮ್ಯುನಿಸ್ಟ್ ಐಡಿಯಾಲಜಿ ಇರೋ ಫ್ರೆಂಡ್ಸ್‌ಗಳ ಕಂತೆ ಪುರಾಣಯೆಲ್ಲ ಕಕ್ಕಿ ಇಲ್ಲ ನಿಮ್ಮ ಕರೀಯರೇ ಮುಗಿಸ್ತೀವೀ ಅಂತ ಬ್ಲಾಕ್ಮೇಲ್ ಮಾಡಿದ್ರಲ್ಲಪ್ಪಾ... '

'ಅದೇ ಆ ನೆನಪುಗಳೇ ವೇಸ್ಟ್ ಯು.ಎಸ್. ಸಿಟಿಜನ್ನಿಗೆ, ಹಂಗೇ ಇಲ್ಲಿನ ಕಮ್ಯುನಿಸ್ಟ್ ಗಿಡಗಳೂ ವೇಸ್ಟ್ ಇವ್ರಿಗೆಲ್ಲ...'

'ಯಾರೋ ಒಬ್ಬ ಸ್ಕ್ರೀನ್ ರೈಟರ್ ಇದ್ದನಲ್ಲ, ಅವ್ನ ನಮ್ಮ ಕಾಲೇಜಿಗೆ ಆವತ್ತೆ ಕರ್ಸಿದ್ರಲ್ಲ, ಆತ ಒಂದು ನಾಟ್ಕ ಬರ್ದಿದ್ದ ಅಲ್ವಾ...' ಅಂತ ಮ್ಯಾಕ್ಸ್ ಎದ್ದು ಹೋಗಿ ಇನ್ನೊಂದಷ್ಟು ಐಸ್ ಗೆಡ್ಡೆಗಳನ್ನು, ಹಾಗೇ ಫ್ರಿಡ್ಜಿಂದ ಉಪ್ಪಿನ ಕಾಯಿ ಎತ್ತಿಕೊಂಡು ಬಂದು ಕುಕ್ಕಿದ.

ಅದರತ್ತ ಕಣ್ಣು ಹಾಯಿಸಿ ಇನ್ನಷ್ಟು ಕಾಲಗಲಿಸಿ, ತನ್ನ ಡುಮ್ಮ್-ಡುಮ್ಮ್ ಮೂವತ್ತೈದರ ತೊಡೆಗಳನ್ನು ಕಷ್ಟಪಟ್ಟು ಕಟ್ಟಿ ಹಾಕಿದ್ದ ಹಳೆ ಜಾಕಿ ಬಾಕ್ಸರ್ ಚಡ್ಡಿಯನ್ನು ಸರಿಪಡಿಸಿಕೊಂಡು 'ಬರೀ ಉಪ್ಪಿನ್ ಕಾಯಲ್ಲಿ ಅಡ್ಜಸ್ಟ್ ಮಾಡ್ಸಿಬಿಟ್ಯಲ್ಲ ಗುರುವೇ...' ಅಂತ ಬೆರಳು ಹಾಕಿ ನೆಕ್ಕಿದ.

'ಬರ್ತಾನೆ ಮಧ್ಯಾಹ್ನ... ಆಮ್ಲೆಟ್ ಏನಾದ್ರೂ ಮಾಡ್ಕೋಣ ಸುಮ್ನಿರು....'

'ನಮ್ಗೆಲ್ಲ ಟೈಲೇರ್ ಮೇಡ್ ಸ್ಪೆಷಲ್ ಲಂಚೆಲ್ಲ ಇಲ್ವಾ...'

'ಅದೆಲ್ಲ ಜಡ್ಜ್, ಪೊಲೀಸ್, ಫಿಲ್ಮ್ ಸ್ಟಾರ್ಸ್‌ಗಳಿಗೆ... ಇಂತವರೆಲ್ಲ ಈ ಬಿಗ್ ಶಾಟ್ ರೈ ಸ್ಪೆಷಲ್ ಫ್ರೆಂಡ್ಸ್‌ಗಳಪ್ಪ'

'ಫಿಫ್ಟೀಸಲ್ಲೇ ಬಾಂಬೆ ಕಡೆ ಹೋದ್ರಲ್ವ ಇವ್ರೆಲ್ಲಾ...'

'ಯಸ್... ಇವ್ರೂ ಫಿಸಿಕಲಿ ಭಾರೀ ಹಟ್ಟಾ-ಕಟ್ಟಾ ಅಂತಾರಲ್ಲ ಹಾಗೇ, ಅಲ್ಲಿ ಹೋಗೀ ಆ ನಾರ್ತ್ ಮುಂಬೈಯಲ್ಲಿ ರಕ್ತ ಸುರಿಸಿ, ಗ್ಯಾಂಗ್ ವಾರ್ ಎಲ್ಲ ಫೇಸ್ ಮಾಡಿ, ಇವ್ರ ಕಡೆ ಅದೆಷ್ಟೋ ಜನ ಸತ್ತು... ಮತ್ತೆ ಇಲ್ಲಿಂದ ಜನಗಳನ್ನ ಕರ್ಕೊಂಡ್ ಹೋಗಿ ಇವ್ರ ಗ್ಯಾಂಗ್ ಗಟ್ಟಿ ಮಾಡೀ...'

'ಅಲ್ಲಿರೋವ್ರು ಇವ್ರನೆಲ್ಲ ನೋಡಿ ಹೆದ್ರಿದ್ರೂ ಅನ್ಸುತ್ತೆ....'

'ಅದೇ.... ಹಂಗೂ ಹಿಂಗೂ ಕೊನೆಗೆ ನೈನ್ಟೀಸಲ್ಲಿ ಈ ಜನ ಮುಂಬೈಯಲ್ಲಿ ತಮ್ಮ ಬೇರು ಊರಿದ್ರು... ಲಾಂಜಸ್ಸು... ಹೋಟೆಲ್‌ಗಳು.... ಬಾರ್‌ಗಳು... ಬ್ಯುಲಡರ್ಸು... ಹಾಗೇ...'

'ಇಟಲಿಯನ್ನರು ಅಮೆರಿಕದಲ್ಲಿ ಸೆಟ್ಲ್ ಆದ್ರಲ್ಲ... ಹಾಗೇ...'

'ಅದೇ ಇಟಲಿಯನ್ನರು ಒಂಥರಾ ಸ್ಟಾಂಡ್ ಇನ್ ಫಾರ್ ರೋಮನ್ಸ್... ರೈಟ್'

'ಹೌದು... ಅದೇ ಆ ರೈಟರ್ ನೀನ್ ಹೇಳ್ತಾ ಇದ್ಯಲ್ಲ... ಅವ್ನು ನಮ್ಮ ಕಾಲೇಜಲ್ಲಿ ಆವತ್ತು ಬಂದಿದ್ದಾಗ ಸ್ಪೀಚ್ ಕೊಟ್ಟಿದ್ದಲ್ಲ...ಎಂಟ್ರೋಪಿ ಅಂತ...ಬರೀ ಥರ್ಮೋಡೈನಾಮಿಕ್ಸ್ ಅಥವಾ ಇನ್ಫರ್ಮೇಶನ್ಸ್ ಥಿಯರಿ ಅಲ್ಲಿ ಮಾತ್ರ ಅಲ್ಲ ಅಪ್ಪ... ಎಂಟ್ರೋಪಿ ಈಸ್ ಎವ್ರಿವೇರ್ ಅಂದಿದ್ದ ಅಲ್ವಾ...'ಆರ್ಡರ್ ಇಂದ ಕೆಯಾಸ್ ಕಡೆಗೆ'... ಸ್ಟಡೀ ಆಫ್ ಡಿಸ್‌ಆರ್ಡರ್ಲಿನೆಸ್.... ಕಾರ್ ಎಂಜಿನ್ ಫ್ಯುಯೆಲ್ ಉರ್ಸೀ ಕಾರ್ ಓಡಿದ್ ಹಾಗೇ...ರೋಮನ್ ಎಂಪೈರ್ ಹೋಗ್ತಾ ಹೋಗ್ತಾ ನಿಧಾನಕ್ಕೆ ಬಿದ್ದ್ ಹೋದ್ರಲ್ಲ... ಅದೂ ಎಂಟ್ರೋಪಿನೇ ಅಂದಿದ್ದ ಅಲ್ವಾ ...

'ಬಟ್ಟ್ ರೋಮನ್ ಎಲ್ಲಿ ಬಿದ್ದು ಹೋದ್ರೂ... ಆ ಕಾನ್ಸ್ ಸ್ಟಾಂಟೇನಿನ್ ಕ್ರಿಶ್ಚಿಯನ್ ಆಗಿ ಕನ್ವರ್ಟ್ ಆದ ಅಲ್ವಾ...'

'ಎಂಥಾ ಪವಾಡ ಮಾರಾಯ... ಆಕಾಶದಲ್ಲಿ